ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಮಾನವರಿಗೂ ಹಸುಗಳ ಹಾಗೆ ದೊಡ್ಡ ಕಿವಿಗಳಿದ್ದರೆ ಏನಾಗುತ್ತಿತ್ತು?



ಮೊಬೈಲನ್ನು ಕಿವಿಯೊಳಗೇ ಇಟ್ಟುಕೊಳ್ಳಬಹುದಾಗಿತ್ತು.

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕ
ಬಾಯಿ ಬಡುಕನಿಗೂ, ಬಾಯಿ ಮುಚ್ಚುವವನಿಗೂ ಏನು ವ್ಯತ್ಯಾಸ?
ಅವನು ಬ್ರೇಕಿಂಗ್ ನ್ಯೂಸಿಗ. ಇವಳು ಫೇಷಿಯಲ್ ಎಕ್ಸ್‌ಪರ್ಟ್.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಗಾಳಕ್ಕೂ, ಕೋಳಕ್ಕೂ ಏನು ವ್ಯತ್ಯಾಸ?
ಕಾನೂನಿನ ಒಳದಾರಿಗಳೇ; ಅಲ್ಲಿ ನುಸುಳಿದರೆ ಗಾಳಕ್ಕೆ ಬಿದ್ದವನು ಕೋಳಕ್ಕೆ ಸಿಗನು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಹೆಣ್ಣು ಗಂಡನ ಮನೆ ಪ್ರವೇಶಿಸುವಾಗ ಬಲಗಾಲಿಟ್ಟು ಒಳಗೆ ಬಾ ಎನ್ನುವರು. ಕಾಲುಗಳಿಗೆ ಭೇದ ಉಂಟೆ?



ಅದು 'ರೈಟ್ ಅಪ್ರೋಚ್' ಹೊಂದಿರು ಎನ್ನುವುದರ ಸೂಚನೆಯಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಜೀವನ ನಾಟಕದಲ್ಲಿ ಸೈಡ್ ವಿಂಗ್‌ಗಳಿಗೂ ಹೆಚ್ಚು ಮಹತ್ವ ಇದೆಯೆ?
ನಿಶ್ಚಿತವಾಗಿ. ನಿದ್ರಾಸಮಯವೇ ಜೀವನ ನಾಟಕದ ಸೈಡ್ ವಿಂಗ್.

ಕೆ.ಎಂ. ಶಿವಕುಮಾರ್, ಮೈಸೂರು
ಸ್ವಾರ್ಥವಿಲ್ಲದ ಮಂದಿಯನ್ನು ಊಹಿಸಿಕೊಳ್ಳಬಹುದೆ ರಾಂಜೀ?
ಖಂಡಿತ. ಅಂತಹವರು ದೊರಕುವುದು ಊಹೆಯಲ್ಲಿ ಮಾತ್ರ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಸುಖಜೀವನಕ್ಕೆ ದಡ್ಡ ಹೆಂಡತಿ ಲೇಸೋ, ಗಿಡ್ಡ ಹೆಂಡತಿ ಲೇಸೋ?
(ಹೃದಯವಂತಿಕೆಯ ವಿಷಯದಲ್ಲಿ) ದೊಡ್ಡ ಹೆಂಡತಿ ಲೇಸು.

ನಾ. ಜ್ಯೋತಿ, ಹೂವಿನಹಡಗಲಿ
ಪತ್ರಕರ್ತನಿಗೂ, ಸೃಷ್ಟಿಕರ್ತನಿಗೂ ಇರುವ ವ್ಯತ್ಯಾಸ?
ಸೃಷ್ಟಿಕರ್ತ ತಾನು ಎಂದಿಗೂ ಪತ್ರಕರ್ತ ಎಂದುಕೊಳ್ಳುವುದಿಲ್ಲ.

ಆರ್. ಮಧುಸೂದನ್, ಹಾಸನ
ಜೂಜನ್ನು ಜವಾಬ್ದಾರಿಯಿಂದ ಆಡಿ ಎನ್ನುವ ಜಾಹೀರಾತಿಗೆ ನೀವೇನೆನ್ನುತ್ತೀರಿ?
ಆ ಜಾಹೀರಾತು ಚುನಾವಣೆಯಲ್ಲಿ ಮತವನ್ನೊಡ್ಡುವ ಮತದಾರರಿಗೆ ಹೆಚ್ಚು ಅನ್ವಯ.

ಬಿ. ಚಂದ್ರೇಗೌಡ, ಬೆಂಗಳೂರು
ಕೈಹಿಡಿದವಳು ಕಾಲೆಳೆಯುವುದರಲ್ಲೇ ಮಗ್ನಳಾದರೆ ಗಂಡನ ಗತಿಯೇನು?
ಮಾನಸಿಕವಾಗಿ ಎಲಾಸ್ಟಿಸಿಟಿ ಬೆಳೆಸಿಕೊಂಡರೆ ಎಳೆದವಳೇ ಬಳಲುವಳು.

ಮಹಾವೀರ ಕಾಸರ, ಶಿವಮೊಗ್ಗ
ಗುಡಿಸಿ ಎಂದರೆ ಗೊತ್ತು. ಗುಂಡಾಂತರ ಎಂದರೆ?
ಗುಂಡಿನ ತರಹ – ಗುಂಡಿನ್ತರ – ಗುಂಡಾಂತರ; ನುಣ್ಣಗೆ ಬೋಳಿಸಿದ ಎಂದು.

ರವಿ ಎಂ. ಪೈ, ಹೊನ್ನಾವರ
ನುಡಿದಂತೆ ನಡೆಯುವ ಜನರು ಏಕೆ ಕಡಿಮೆಯಾಗುತ್ತಿದ್ದಾರೆ?
'ಹಾಗೇನಿಲ್ಲ. ಹೆಚ್ಚೇ ಆಗುತ್ತಿದ್ದೇವೆ. ನಮ್ಮ ನುಡಿ, ನಡೆ ಎರಡೂ ವಕ್ರ' ಎಂದನಾ ಕುಡುಕ.

ಮೈಸೂರು ಕುಸುಮ, ಶ್ರವಣಬೆಳಗೊಳ
ಯೋಗ್ಯರಿಗೆ ಮತ ಹಾಕಿ ಎನ್ನುವರಲ್ಲ, ಯೋಗ್ಯರು ಚುನಾವಣೆಗೆ ನಿಲ್ಲುವರೆ?
ದುಸಾಧ್ಯ. ಹಣವಿಲ್ಲದೆ ಚುನಾವಣೆಯಿಲ್ಲ; ಗುಣವಿದ್ದಲ್ಲಿ ಹಣವಿಲ್ಲ. ಕೋಳೆಯೂರಿಗೆ ತೊಟ್ಟಿಯೇ ರಾಜ.

## ಬಹುಮಾನಿತ ಪ್ರಶ್ನೆ

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಕಾಡು ಕಬಳಿಸಿ, ಕೆರೆ ಕಬಳಿಸಿದರೂ ಡೆಮಾಕ್ರಸಿಯಲ್ಲಿ ಸತ್ತಂತಿರುವ ಜನರನ್ನು ಬಡಿದೆತ್ತುವುದೆಂತು?
ಹಣದ ಬಲೆಯಲ್ಲಿ ಹೆಣವಾಗಿರುವ ಕಾನೂನು ವ್ಯವಸ್ಥೆಗೆ ಜೀವ ನೀಡುವ ಮೂಲಕ.

ಪಿ.ಜೆ. ರಾಘವೇಂದ್ರ, ಮೈಸೂರು
ಪೆನ್ ಡ್ರೈವ್ ಸ್ತ್ರೀಲಿಂಗವೋ, ಪುಲ್ಲಿಂಗವೋ?
ಸಿಗಬಾರದವರ ಕೈಗೆ ಸಿಕ್ಕರೆ ಗುಲ್ಲಾಗುವ (ಉ)ಭಯಲಿಂಗ.

ಎಂ.ಸಿ. ಧನ್ಯತಾ, ಬೆಂಗಳೂರು
ಮತಕ್ಕೂ, ಮತಿಗೂ ಏನು ಸಂಬಂಧ?
ಮತಿ ಮಥಿತವಾದಾಗಲೇ ಮತದ ಉದಯ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಹಣ ಸಂಪಾದಿಸುವುದು ಹೇಗೆಂದು ಬರೆದವರಿದ್ದಾರೆ. ಜನ ಸಂಪಾದಿಸುವುದು ಹೇಗೆ?



ಅವರವರ ಪ್ರಾಯಕ್ಕೆ, ಅಭಿಪ್ರಾಯಕ್ಕೆ ಸ್ಪಂದಿಸುವುದರ ಮೂಲಕ.

ಮಂಡಿ ಕುಮಾರ್, ಬೆಂಗಳೂರು
ಉಚಿತ ಎನ್ನುವ ಕಡೆ ಜನರು ಖಚಿತವಾಗಿ ಹೋಗುವುದೇಕೆ?
ಕೋ ಅನ್ನೋದು ಕುಲದಲ್ಲೇ ಇಲ್ಲದ, ತಾ ಅನ್ನೋದು ತಲೆತಲಾಂತರಕ್ಕಿರುವ ಭಿಕ್ಷಾಬುದ್ಧಿ.

ದಿನೇಶ್, ಗುಡ್ಡದೂರು
ಚಳ್ಳೆಹಣ್ಣಿನ ತೋಟ ನೋಡಿದ್ದೀರಾ ರಾಮ್?
ಹೂಂ. ಅದರ ಇನ್ನೊಂದು ಹೆಸರೇ ಪಾರ್ಲಿಮೆಂಟ್.

ಕೆ.ಎಂ.ವಿಭೂತಿ, ಹರಿಹರ
ಪ್ರಸ್ತುತ ನಮ್ಮ ರಾಜಕಾರಣಿಗಳಿಗಿರುವುದು ದೂರದೃಷ್ಟಿಯೋ, ದರಿದ್ರ ದೃಷ್ಟಿಯೋ?
ಎಲ್ಲೆಡೆ ತಪ್ಪು ಹುಡುಕುವ ದೂರುದೃಷ್ಟಿ.

■ **ರಾಮ್**